# ನಗರಸಭಾ ಕಾರ್ಯಾಲಯ, ಚಿತ್ರದುರ್ಗ.

ಫೋನ್ ನಂ: 08194-222401, ಸಹಾಯವಾಣಿ: 08194-221588,
ಫ್ಯಾಕ್ಸ್: 08194-221790, Website: www.chitradurgacity.gov.in

ಸಂ: ನಸಚಿ:ಡಿಸಿಬಿ(5)ಸಿಆರ್:03:2008-09

ದಿನಾಂಕ: 06-01-2009

## ಸಾರ್ವಜನಿಕ ಪ್ರಕಟಣೆ

## " ಕಂದಾಯ ವಸೂಲಾತಿ ಆಂದೋಲನ "

ಈ ಮೂಲಕ ಚಿತ್ರದುರ್ಗ ನಗರದ ಸಮಸ್ತ ನಾಗರಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬಹುಪಾಲು ಖಾತೆದಾರರು ಹಾಗೂ ಉದ್ದಿಮೆದಾರರು ತಮಗೆ ಸಂಬಂಧಿಸಿದ ನಿವೇಶನ/ಕಟ್ಟಡಗಳ ಕಂದಾಯ (ಎ.ಆರ್.ವಿ ಮತ್ತು ಎಸ್.ಎ.ಎಸ್.), ನೀರಿನ ಕಂದಾಯ ಹಾಗೂ ತಾವು ನಡೆಸುತ್ತಿರುವ ಉದ್ದಿಮೆಗಳ ಪರವಾನಗಿ ಫೀಗಳನ್ನು ನಗರಸಭೆಗೆ ಕಾಲ ಕಾಲಕ್ಕೆ ಪಾವತಿಸದಿರುವುದರಿಂದ ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆಗೆ, ಮೂಲಭೂತ ಸೌಕರ್ಯಗಳ ನಿರ್ವಹಣೆಗೆ ಹಾಗೂ ದಿನನಿತ್ಯದ ಆಡಳಿತಾತ್ಮಕ ವೆಚ್ಚಗಳನ್ನು ನಿಭಾಯಿಸಲು ನಗರಸಭೆಗೆ ಕಷ್ಟದಾಯಕವಾಗಿರುತ್ತದೆ.

ಸರ್ಕಾರದ ಅನುದಾನಗಳನ್ನು ಸರ್ಕಾರವು ನಿಗಧಿಪಡಿಸಿದ ಕಾಮಗಾರಿಗಳಿಗೆ/ಯೋಜನೆಗಳಿಗೆ ಮಾತ್ರ ಅಷ್ಟೇ ವಿನಿಯೋಗಿಸಬೇಕಾಗಿದ್ದು, ಬಾಕಿ ಉಳಿದ ನಗರಸಭೆಯ ಸಂಪೂರ್ಣ ಸ್ವಚ್ಛತೆ, ಬೀದಿದೀಪ, ನೀರಿನ ವ್ಯವಸ್ಥೆ, ರಸ್ತೆ ನಿರ್ವಹಣೆ ಹಾಗೂ ಇತರೆ ವಹಿವಾಟನ್ನು ಕೇವಲ ತೆರಿಗೆ ವಸೂಲಾತಿಯಿಂದಲೇ ನಿರ್ವಹಿಸಬೇಕಾಗಿರುತ್ತದೆ. ಪ್ರಯುಕ್ತ ಬಾಕಿ ಉಳಿದಿರುವ ತೆರಿಗೆ, ಲೈಸೆನ್ಸ್ ಫೀಗಳನ್ನು ವಸೂಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಈ ನಗರಸಭೆ ವತಿಯಿಂದ **"ಕಂದಾಯ ವಸೂಲಾತಿ ಆಂದೋಲನ"**ವನ್ನು ಹಮ್ಮಿಕೊಳ್ಳಲಾಗಿದೆ. ಖಾತೆದಾರರು/ಉದ್ದಿಮೆದಾರರು ಈ ಆಂದೋಲನವನ್ನು ಸದುಪಯೋಗಪಡಿಸಿಕೊಂಡು **"ತಮ್ಮ ಮನೆ ಬಾಗಿಲಿಗೆ ಬಂದಿರುವ ಸಿಬ್ಬಂದಿ ವರ್ಗದವರಿಗೆ"** ಸ್ಪಂದಿಸಿ ನಿವೇಶನ/ಕಟ್ಟಡ ಕಂದಾಯ, ನೀರಿನ ಕಂದಾಯ ಹಾಗೂ ಟ್ರೇಡ್ ಲೈಸೆನ್ಸ್ ಫೀ ಪಾವತಿಸಿ ನಗರಸಭೆಯೊಂದಿಗೆ ಸಹಕರಿಸಿ ಸದರಿ ಕಂದಾಯ ವಸೂಲಾತಿ ಆಂದೋಲನವನ್ನು ಯಶಸ್ವಿಗೊಳಿಸಲು ಕೋರಿದೆ.

**ಎ.ಆರ್.ವಿ. ಕಂದಾಯ :**

ಎ.ಆರ್.ವಿ. ಪದ್ಧತಿಯಲ್ಲಿ 2001-02 ಕ್ಕೆ ಬಾಕಿ ಇರುವ ನಿವೇಶನ/ಮನೆ ಕಂದಾಯ ಪಾವತಿಸುವುದು.

**ಎಸ್.ಎ.ಎಸ್. ಕಂದಾಯ :**

"ಚಿತ್ರದುರ್ಗ ನಗರದ ಆಸ್ತಿ ಮಾಲಿಕರುಗಳ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, ಜುಲೈ ತಿಂಗಳಿನಿಂದ ಮಾಹೆಯಾನ ಶೇಕಡ 2 ರಂತೆ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ಮೇಲ್ಕಂಡ ದಿನಾಂಕದೊಳಗೆ 2008-09ನೇ ಸಾಲಿನ ಆಸ್ತಿ ತೆರಿಗೆ, ನೀರಿನ ತೆರಿಗೆ, ಉದ್ದಿಮೆ ಪರವಾನಗಿ ಮತ್ತು ಕಟ್ಟಡ ಬಾಡಿಗೆಗಳನ್ನು ಪಾವತಿಸಲು ಕೋರಿದೆ."

2002-03, 2003-04, 2004-05, 2005-06, 2006-07, 2007-08 ಮತ್ತು 2008-09ನೇ ಸಾಲಿನವರೆಗೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ ಪಾವತಿಸದೆ ಬಾಕಿ ಇರುವ ಸ್ವತ್ತಿನ ನಿವೇಶನ, ವಸತಿ, ವಾಣಿಜ್ಯ, ಇತರೆ ಕಟ್ಟಡಗಳ ಕಂದಾಯಕ್ಕೆ ಪ್ರತಿ ತಿಂಗಳು ಶೇಕಡ 2 ರಷ್ಟು ದಂಡವನ್ನು ಲೆಕ್ಕ ಹಾಕಿ ನಿಗಧಿಪಡಿಸಿರುವ ಬ್ಯಾಂಕ್‌ಗಳಿಗೆ ಪಾವತಿಸಿ ಆಸ್ತಿ ತೆರಿಗೆ ವಿವರ ಪಟ್ಟಿ ಹಾಗೂ ಬ್ಯಾಂಕ್ ಚಲನ್‌ಗಳನ್ನು ಈ ಕಚೇರಿಗೆ ಸಲ್ಲಿಸುವುದು.

ತಪ್ಪಿದಲ್ಲಿ ಕರ್ನಾಟಕ ಪುರಸಭೆ ಕಾಯ್ದೆ 1964 ನಿಯಮ 142, 143 ರ ಪ್ರಕಾರ ಕಾನೂನು ರೀತ್ಯಾ ಕ್ರಮ ಜರುಗಿಸಿ ಬಾಕಿ ಕಂದಾಯ ನಿಂತಿರುವ ಆಸ್ತಿಗಳ ಜಪ್ತಿ ಕ್ರಮ ಕೈಗೊಳ್ಳಲಾಗುವುದು ಹಾಗೂ ನಳಗಳ ಜೋಡಣೆಯನ್ನು ಕಡಿತಗೊಳಿಸಲಾಗುವುದು. ಇದಕ್ಕೆ ಆಸ್ಪದ ಕೊಡದೆ ಬಾಕಿ ತೆರಿಗೆಯನ್ನು ಪಾವತಿಸಲು ಕೋರಿದೆ.

**ನೀರಿನ ಕಂದಾಯ :**

ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆಗೆ ನಲ್ಲಿ ಸಂಪರ್ಕ ಪಡೆದಿರುವ ಸ್ವತ್ತಿನ ಮಾಲೀಕರುಗಳು ಬಾಕಿ ಇರುವ ನೀರಿನ ಕಂದಾಯವನ್ನು ಕೂಡಲೇ ನಗರಸಭೆ ಸಿಬ್ಬಂದಿಗೆ ಪಾವತಿಸಿ ರಸೀದಿ ಪಡೆಯುವುದು. ತಪ್ಪಿದಲ್ಲಿ ಬಾಕಿ ಕಂದಾಯ ಹೊಂದಿರುವ ನಲ್ಲಿ ಸಂಪರ್ಕವನ್ನು ಕಡಿತಗೊಳಿಸಲಾಗುವುದಲ್ಲದೆ ಬಾಕಿ ಇರುವ ನಲ್ಲಿ ಕಂದಾಯವನ್ನು ಮನೆ ಕಂದಾಯಕ್ಕೆ ಸೇರಿಸಿ ವಸೂಲಿ ಕ್ರಮ ಕೈಗೊಳ್ಳಲಾಗುವುದು.

**ಉದ್ದಿಮೆ ಪರವಾನಗಿ :**

ನಗರ ವ್ಯಾಪ್ತಿಯಲ್ಲಿರುವ ಎಲ್ಲಾ ಉದ್ದಿಮೆದಾರರು ತಮ್ಮ ಉದ್ದಿಮೆಗಳಿಗೆ ಸಂಬಂಧಿಸಿದ ಟ್ರೇಡ್ ಲೈಸೆನ್ಸ್‌ನ್ನು ನಗರಸಭೆಯಿಂದ ಪಡೆದು ವ್ಯಾಪಾರ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು. ಉದ್ದಿಮೆ ಪರವಾನಗಿ ಹೊಂದಿಲ್ಲದೆ ಬಾಕಿ ಇರುವ ಉದ್ದಿಮೆದಾರರು ಕೂಡಲೇ ನಗರಸಭೆಗೆ ಅರ್ಜಿ ಸಲ್ಲಿಸಿ, ಫೀ ಮತ್ತು ದಂಡ ಪಾವತಿಸಿ ಟ್ರೇಡ್ ಲೈಸೆನ್ಸ್‌ನ್ನು ಪಡೆಯತಕ್ಕದ್ದು/ನವೀಕರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.

**ಕಂದಾಯ ಪಾವತಿಸಿ ನಗರದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು**
**ನಗರಸಭೆಯೊಂದಿಗೆ ಸಹಕರಿಸಿ.**

(ಎಸ್.ಟಿ. ಮೋಹನ್‌ರಾಜು)
ಪೌರಾಯುಕ್ತರು,
ನಗರಸಭೆ, ಚಿತ್ರದುರ್ಗ.

(ಎಸ್. ಭಾಸ್ಕರ್)
ಸ್ಥಾಯಿ ಸಮಿತಿ ಅಧ್ಯಕ್ಷರು,
ನಗರಸಭೆ, ಚಿತ್ರದುರ್ಗ.

(ಬಿ.ಆರ್. ರುದ್ರಾಣಿ)
ಉಪಾಧ್ಯಕ್ಷರು,
ನಗರಸಭೆ, ಚಿತ್ರದುರ್ಗ.

(ಗೌಸಿಯಾಬಾನು)
ಅಧ್ಯಕ್ಷರು,
ನಗರಸಭೆ, ಚಿತ್ರದುರ್ಗ.